## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2430 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ. |
| ಉತ್ತರಿಸಬೇಕಾದ ದಿನಾಂಕ | : | 27.03.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು, |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಜಿಲ್ಲೆಗಳಲ್ಲಿರುವ ವಿವಿಧ ಪರಿಶಿಷ್ಟ ಜಾತಿಯ ಸರ್ಕಾರದ ಅನುಸೂಚಿತ ಜಾತಿ ಪಟ್ಟಿಯಲ್ಲಿರುವ ಸಮುದಾಯದ ಕುಟುಂಬಗಳು, ಜನಸಂಖ್ಯೆ, ಜನವಸತಿ ಪ್ರದೇಶಗಳು, ಹೊಂದಿರುವ ಸೌಲಭ್ಯಗಳು, ಶೈಕ್ಷಣಿಕ ಮಟ್ಟ ಮತ್ತಿತರ ಕುಲಶಾಸ್ತ್ರೀಯ ಮಾಹಿತಿಗಳೇನು; ಸಮುದಾಯಗಳ ಕುಟುಂಬಗಳ ಮತ್ತು ಜನಸಂಖ್ಯೆ ಜಿಲ್ಲಾವಾರು ವಿವರಗಳೇನು; ಮುಂದಿನ ದಿನಗಳಲ್ಲಿ ಪರಿಶಿಷ್ಟ ಜಾತಿಯ ಕುಟುಂಬಗಳ ನವೀಕೃತ ಡಿಜಿಟಲ್ ಡೇಟಾಬೇಸ್ ಸಿದ್ಧಪಡಿಸಲು ಸರ್ಕಾರದ ಕ್ರಮಗಳೇನು; | 2011ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆ: 6.11 ಕೋಟಿ ಇದ್ದು ಅದರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ:1.05 ಕೋಟಿ (17.15%) ಇರುತ್ತದೆ. ಜಿಲ್ಲಾವಾರು ಜನಸಂಖ್ಯೆಯ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.<br><br>21.78 ಲಕ್ಷ ಪ.ಜಾತಿಯ ಕುಟುಂಬಗಳು ಇದ್ದು 2011ರ ಜನಗಣತಿಯಂತೆ ಗ್ರಾಮವಾರು, ವಾರ್ಡುವಾರು, ತಾಲ್ಲೂಕುವಾರು, ಜಿಲ್ಲಾವಾರು ಪರಿಶಿಷ್ಟ ಜಾತಿಯವರ ಜನಸಂಖ್ಯೆಯ ವಿವರಗಳು ಸಹಾ ಲಭ್ಯವಿರುತ್ತವೆ.<br><br>ವಿವಿಧ ಅಭಿವೃದ್ಧಿ ಇಲಾಖೆಗಳು ಪರಿಶಿಷ್ಟ ಜಾತಿಯ ಕಾಲೋನಿಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿರುತ್ತವೆ.<br><br>ಪರಿಶಿಷ್ಟ ಜಾತಿಯ ಪುರುಷರು ಸಾಕ್ಷರತೆ 74.02 ಇದ್ದು ಮಹಿಳೆಯರ ಸಾಕ್ಷರತೆ 58% ಇರುತ್ತದೆ. ಪರಿಶಿಷ್ಟ ಜಾತಿಯವರ ಕುಲಶಾಸ್ತ್ರೀಯ ಅಧ್ಯಯನವನ್ನು ಡಾ.ಬಿ.ಆರ್ ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಮೂಲಕ ಕೈಗೊಳ್ಳಲಾಗುತ್ತಿದೆ. ಇದಲ್ಲದೇ Castes and Tribes of Southern India by Edgar Thurston ಮತ್ತು People of India: India's Communities (Vols 1-XI) by K.S Singh ರವರುಗಳ ವರದಿಯಲ್ಲಿ ಪರಿಶಿಷ್ಟ ಜಾತಿಯವರ ಕುಲಶಾಸ್ತ್ರೀಯ ಮಾಹಿತಿಗಳನ್ನು ವಿವರವಾಗಿ ನೀಡಿರುತ್ತಾರೆ. |

| | | |
|---|---|---|
| ಆ) | ಸಮಾಜ ಕಲ್ಯಾಣ ಇಲಾಖೆಯ ಅಭಿವೃದ್ಧಿ ನಿಗಮಗಳ ಮೂಲಕ ಪರಿಶಿಷ್ಟ ಜಾತಿಯ ಜನರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದ್ದರೂ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ನಿಗಧಿಪಡಿಸುವ ಸಂದರ್ಭದಲ್ಲಿ ಯಾವುದೇ ಸ್ಪಷ್ಟ ಮತ್ತು ಏಕೀಕೃತ ಮಾನದಂಡಗಳಿಲ್ಲದ ಯೋಜನೆಗಳು ನಿರೀಕ್ಷಿತ ಗುರಿ ತಲುಪದಿರುವುದು ಸರ್ಕಾರ ಗಮನಿಸಿದೆಯೇ; | ಸಮಾಜ ಕಲ್ಯಾಣ ಇಲಾಖೆಯ ಅಧೀನದ ನಿಗಮಗಳಲ್ಲಿ ಅನುಷ್ಠಾನ ಮಾಡುತ್ತಿರುವ ಯೋಜನೆಗಳಿಗೆ ಆರ್ಥಿಕ ಇಲಾಖೆಯಿಂದ ಒದಗಿಸಿದ ಅನುದಾನದಲ್ಲಿ ಯೋಜನೆಯ ಘಟಕ ವೆಚ್ಚದ ಅನುಸಾರ ಭೌತಿಕ ಗುರಿ ನಿಗಧಿಪಡಿಸಲಾಗುತ್ತಿದೆ. ಒಟ್ಟು ಭೌತಿಕ ಗುರಿಗಳಲ್ಲಿ 15% ಗುರಿಯನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರ ಕೋಟಾ, 05% ಗುರಿಗಳನ್ನು ಆಯಾ ನಿಗಮಗಳ ಅಧ್ಯಕ್ಷರ ಕೋಟಾಕ್ಕೆ ಮೀಸಲಿರಿಸಲಾಗುತ್ತಿದೆ. ಉಳಿದ 80% ಗುರಿಗಳನ್ನು ಆಯಾ ವಿಧಾನ ಸಭಾಕ್ಷೇತ್ರದ ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ (ಆಯಾ ನಿಗಮಗಳಡಿ ಬರುವ ಪರಿಶಿಷ್ಟ ಜಾತಿಯ ಸಮುದಾಯಗಳ ಜನಸಂಖ್ಯೆ) ಗುರಿ ನಿಗಧಿಪಡಿಸಲಾಗುತ್ತಿದೆ. |
| ಇ) | ರಾಜ್ಯದಲ್ಲಿರುವ (SCSP) ಪ.ಜಾ.ಉ.ಯೋಜನೆಯೂ ಸೇರಿದಂತೆ ವಿವಿಧ ಯೋಜನೆಗಳಡಿ ಪರಿಶಿಷ್ಟ ಜಾತಿ ಸಮುದಾಯದ ಜನರಿಗೆ ನೀಡಲಾಗುತ್ತಿರುವ ಕಲ್ಯಾಣ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಗುರಿಗಳ ಪೈಕಿ ಸಮುದಾಯಿಕ ಮತ್ತು ವೈಯಕ್ತಿಕ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಅನುಪಾತವನ್ನು ಸ್ಪಷ್ಟ ಮಾನದಂಡಗಳ ಮೂಲಕ ನಿಗಧಿಪಡಿಸಲು ಸರ್ಕಾರದ ಕ್ರಮಗಳೇನು; | |
| ಈ) | ಯೋಜನೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾದರೂ ಕಡಿಮೆ ಟಾರ್ಗೆಟ್ ಇರುವ ಕಾರಣ ಫಲಾನುಭವಿಗಳು ಅನಗತ್ಯವಾಗಿ ಅಲೆದಾಡುವ ಪರಿಸ್ಥಿತಿ ಸೃಷ್ಟಿಯಾಗುತ್ತಿದ್ದು ಗುರಿಯನ್ನು ಆದ್ಯತೀಕರಿಸಿ ಹೆಚ್ಚಿಸುವ ಬಗ್ಗೆ ಹಾಗೂ ಶಾಸಕರ ಅನುದಾನ ಮತ್ತು ಇತರ ಯೋಜನಾ ಅನುದಾನಗಳನ್ನು ಪರಿಶಿಷ್ಟ ಜಾತಿ ಸಮುದಾಯಕ್ಕೆ ಪರಿಣಾಮಕಾರಿಯಾಗಿ ತಲುಪಿಸಲು ಗ್ರಾಮವಾರು ಜನಸಂಖ್ಯೆ, ಬೇಡಿಕೆ ಇತ್ಯಾದಿಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ಅದರ ಆಧಾರದಲ್ಲಿ ತರ್ಕಬದ್ಧ ಯೋಜನೆ ರೂಪಿಸುವ ಕುರಿತು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? | 2011ರ ಜನಗಣತಿಯಂತೆ ಗ್ರಾಮವಾರು, ವಾರ್ಡ್‌ವಾರು ಪರಿಶಿಷ್ಟ ಜಾತಿಯ ಜನಸಂಖ್ಯೆ ಲಭ್ಯವಿದ್ದು, ನಿಗಮಗಳಿಂದ ಅನುಷ್ಠಾನ ಮಾಡುತ್ತಿರುವ ಯೋಜನೆಗಳಿಗೆ ಅನುದಾನದ ಲಭ್ಯತೆಯನುಸಾರ ಭೌತಿಕ ಗುರಿಗಳನ್ನು ನಿಗಧಿಪಡಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. |

**ಸಕಇ 193 ಎಸ್‌ಎಲ್‌ಪಿ 2026**

**(ಡಾ. ಹೆಚ್.ಸಿ. ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

| ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2430 (2115) ಕ್ಕೆ ಉತ್ತರ | | |
|---|---|---|
| ಅನುಬಂಧ-1 | | |
| ಕರ್ನಾಟಕ ರಾಜ್ಯದ ಜಿಲ್ಲಾವಾರು ಪರಿಶಿಷ್ಟಜಾತಿ ಜನಸಂಖ್ಯೆಯ ವಿವರಗಳು (2011 ಜನಗಣತಿ ಪ್ರಕಾರ) | | |
| ಕ್ರಮ ಸಂಖ್ಯೆ | ಜಿಲ್ಲೆ | ಪರಿಶಿಷ್ಟಜಾತಿ ಜನಸಂಖ್ಯೆ |
| 1 | ಬೆಂಗಳೂರು ನಗರ | 11,98,385 |
| 2 | ಕಲಬುರಗಿ | 6,48,782 |
| 3 | ಬೆಳಗಾವಿ | 5,77,418 |
| 4 | ಮೈಸೂರು | 5,36,643 |
| 5 | ಬಳ್ಳಾರಿ | 5,17,409 |
| 6 | ತುಮಕೂರು | 5,06,901 |
| 7 | ಕೋಲಾರ | 4,65,867 |
| 8 | ವಿಜಯಪುರ | 4,42,773 |
| 9 | ರಾಯಚೂರು | 4,00,933 |
| 10 | ಬೀದರ್ | 3,99,785 |
| 11 | ದಾವಣಗೆರೆ | 3,92,595 |
| 12 | ಚಿತ್ರದುರ್ಗ | 3,89,117 |
| 13 | ಹಾಸನ | 3,45,031 |
| 14 | ಬಾಗಲಕೋಟೆ | 3,19,149 |
| 15 | ಚಿಕ್ಕಬಳ್ಳಾಪುರ | 3,12,565 |
| 16 | ಶಿವಮೊಗ್ಗ | 3,08,158 |
| 17 | ಯಾದಗಿರಿ | 2,73,315 |
| 18 | ಮಂಡ್ಯ | 2,65,294 |
| 19 | ಚಾಮರಾಜನಗರ | 2,59,445 |
| 20 | ಕೊಪ್ಪಳ | 2,58,608 |
| 21 | ಚಿಕ್ಕಮಗಳೂರು | 2,53,651 |
| 22 | ಹಾವೇರಿ | 2,19,976 |
| 23 | ಬೆಂಗಳೂರು ಗ್ರಾ | 2,13,700 |
| 24 | ರಾಮನಗರ | 2,03,819 |
| 25 | ಧಾರವಾಡ | 1,77,855 |
| 26 | ಗದಗ | 1,74,196 |
| 27 | ದಕ್ಷಿಣ ಕನ್ನಡ | 1,48,178 |
| 28 | ಉತ್ತರ ಕನ್ನಡ | 1,16,431 |
| 29 | ಉಡುಪಿ | 75,429 |
| 30 | ಕೊಡಗು | 73,584 |
| ಒಟ್ಟು | | **1,04,74,992** |